ಕಛೇರಿ: +91 80 2335 4039
+91 80 2235 4085
ಇ-ಮೇಲ್: com-hfws@karnataka.gov.in

# ಆಯುಕ್ತಾಲಯ
# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**No: NVBDCP/EST7A/COVID 19/2020-21** **Date: 22.12.2020**

## ಸುತ್ತೋಲೆ

ವಿಷಯ:ಮಾರುಕಟ್ಟೆಗಳಲ್ಲಿ ಕೋವಿಡ್-19 ಸರ್ವವ್ಯಾಪಿ ಸಾಂಕ್ರಾಮಿಕ ರೋಗ ತಡೆಗೆ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳು.

ಉಲ್ಲೇಖ: ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ದಿ||30.11.2020 ರಂದು ಮಾರುಕಟ್ಟೆಗಳಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನೀಡಲಾದ ಪ್ರಮಾಣೀಕೃತ ಮಾರ್ಗಸೂಚಿ ಪ್ರಕ್ರಿಯೆಗಳು.

1. ಪ್ರಸ್ತಾವನೆ :ಪ್ರತಿದಿನ ಮಾರುಕಟ್ಟೆಗೆ ಗಣನೀಯ ಪ್ರಮಾಣದಲ್ಲಿ ನಾಗರಿಕರು ತಮ್ಮ ದೈನಂದಿನ ಅಗತ್ಯಗಳ ಖರೀದಿಗೆ ಭೇಟಿನೀಡುತ್ತಿದ್ದಾರೆ. ಇದಲ್ಲದೆ, ಮನರಂಜನೆ ಆಹಾರ ಮಳಿಗೆಗಳಿಗೂ ಕೂಡ ಭೇಟಿ ನೀಡುತ್ತಿದ್ದಾರೆ. ಕೋವಿಡ್-19 ಸರ್ವವ್ಯಾಪಿ ಸಾಂಕ್ರಾಮಿಕ ರೋಗದ ನಂತರ ನಿಧಾನಗತಿಯಲ್ಲಿದ್ದ ಆರ್ಥಿಕ ಚಟುವಟಿಕೆಗಳು ಚುರುಕುಗೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕರು ಮಾರುಕಟ್ಟೆಗಳಿಗೆ ಭೇಟಿ ನೀಡುತ್ತಿರುವುದು ಕಂಡುಬಂದಿದೆ. ಈ ರೀತಿಯ ಹೆಚ್ಚಿನ ಪ್ರಮಾಣದ ಜನಸಂದಣಿಯು ಕೋವಿಡ್-19 ಸೂಕ್ತವಾದ ನಡವಳಿಕೆಗಳನ್ನು ಅಳವಡಿಸಿಕೊಳ್ಳದಿದ್ದಲ್ಲಿ ಇದರ ಸೋಂಕು ಮತ್ತಷ್ಟು ಮುಂದುವರಿಯುವ ಸಾಧ್ಯತೆಗಳಿವೆ ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ವಿವಿಧ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿಕೊಂಡು ನಿರ್ದಿಷ್ಟವಾದ ಕ್ರಮಗಳನ್ನು ಮಾರುಕಟ್ಟೆಗಳಲ್ಲಿ ಅನುಸರಿಸುತ್ತಾ ಈ ಕಾಯಿಲೆಯನ್ನು ನಿಯಂತ್ರಣ ಮಾಡಲು ಸೂಚಿಸಲಾಗಿದೆ.

ಈ ಮಾರ್ಗಸೂಚಿಗಳು ಸಗಟು ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳಿಗೆ ಅನ್ವಯವಾಗುತ್ತವೆ. ಇದರಲ್ಲಿ ಕೆಲವು ದೊಡ್ಡ ಪ್ರಮಾಣದ ಮಾರುಕಟ್ಟೆಗಳಾದ ಮಾಲ್ ಗಳು, ಹೈಪರ್ ಮಾರ್ಕೆಟ್‌ಗಳು ಸೂಪರ್ ಮಾರ್ಕೆಟ್‌ಗಳು ಕೂಡ ಸೇರುತ್ತವೆ. ಈ ವಾಣಿಜ್ಯ ಮಳಿಗೆಗಳ ನಿರ್ವಹಣೆಗೆ ಈಗಾಗಲೇ ಭಾರತ ಸರ್ಕಾರವು ಮಾರ್ಗಸೂಚಿಯನ್ನು ನೀಡಲಾಗಿತ್ತು. ಈ ಮಾರ್ಗಸೂಚಿಯೂ ಮುಂದಿನ ಜಾಲತಾಣದಲ್ಲಿ ಲಭ್ಯವಿದ್ದು(https://www.mohfw.gov.in/pdf/4SoPstobefollowedinShoppingMalls.pdf) ಇದೇ ರೀತಿಯ ಮಾರ್ಗಸೂಚಿಯನ್ನು ರೆಸ್ಟೋರೆಂಟ್ ಮತ್ತು ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ ಮತ್ತೊಂದು ಮಾರ್ಗಸೂಚಿಯನ್ನು ಈ ಜಾಲತಾಣದಲ್ಲಿ ನೀಡಲಾಗಿತ್ತು(https://www.mohfw.gov.in/pdf/3SoPstobefollowedinRestaurants.pdf) ಮತ್ತು ಕಚೇರಿಗಳು, ಧಾರ್ಮಿಕ ಸಂಸ್ಥೆಗಳು, ಪ್ರಾರ್ಥನಾ ಮಂದಿರಗಳು,ತರಬೇತಿ ಕೇಂದ್ರಗಳು, ಯೋಗ ಕೇಂದ್ರಗಳು ಜಿಮ್ನೆಶಿಯಂಗಳು, ಸಿನಿಮಾಮಂದಿರಗಳು, ಚಲನಚಿತ್ರರಂಗಮಂದಿರಗಳು ಹಾಗೂ ಇನ್ನಿತರ ಚಟುವಟಿಕೆಗಳಿಗೆ ಸಂಬಂಧಪಟ್ಟ ಈ ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿತ್ತು ಮತ್ತು ಇದಲ್ಲದೆ ನಿರ್ದಿಷ್ಟವಾದ ಸೂಚನೆಗಳನ್ನು ಕಾಲಕಾಲಕ್ಕೆ ರಾಜ್ಯ ಸರ್ಕಾರವು ನೀಡುತ್ತ ಬಂದಿದೆ.

ಕಂಟೇನ್ಮೆಂಟ್ ವಲಯಗಳಲ್ಲಿರುವ ಮಾರುಕಟ್ಟೆಗಳನ್ನು ಮುಚ್ಚಲು ಸೂಚಿಸಲಾಗಿತ್ತು. ಕಂಟೈನ್ಮೆಂಟ್ ವಲಯಗಳನ್ನು ಹೊರತುಪಡಿಸಿರುವ ಮಾರುಕಟ್ಟೆಗಳನ್ನು ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ.

2. **ಸಂಕಷ್ಟದಲ್ಲಿರುವ ಜನಸಂಖ್ಯೆಯ ಸಂರಕ್ಷಣೆ** : ಅರುವತ್ತೈದು ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ಸಾಂಗತ್ಯ ಅಸ್ವಸ್ಥತೆಯಿಂದ ಬಳಲುತ್ತಿರುವ ವ್ಯಕ್ತಿಗಳು ಗರ್ಭಿಣಿ ಮಹಿಳೆಯರು ಮತ್ತು ಮಕ್ಕಳು ಇವರು ಅಗತ್ಯವಿರುವ ಸಂದರ್ಭಗಳಲ್ಲಿ ಹೊರತುಪಡಿಸಿ ಇನ್ಯಾವ ಸಂದರ್ಭದಲ್ಲೂ ಮಾರುಕಟ್ಟೆಗಳಿಗೆ ಭೇಟಿ ನೀಡುವುದರ ಬಗ್ಗೆ ಮಾರ್ಗದರ್ಶನ ನೀಡಲಾಗಿದೆ. ಈ ಬಗ್ಗೆ ಮಾರುಕಟ್ಟೆ ಮಾಲೀಕರ ಸಂಘಕ್ಕೂ ಸೂಚನೆ ನೀಡಲಾಗಿದೆ.

ಅತಿಹೆಚ್ಚು ಗಂಡಾಂತರ ಆರೋಗ್ಯ ಪರಿಸ್ಥಿತಿಯಲ್ಲಿರುವ ಉದ್ಯೋಗಿಗಳದಾ ಹಿರಿಯ ಉದ್ಯೋಗಿಗಳು, ಗರ್ಭಿಣಿ ಮಹಿಳಾ ಉದ್ಯೋಗಿಗಳು ಮತ್ತು ಅನಾರೋಗ್ಯ ಪರಿಸ್ಥಿತಿ ಯಿಂದ ಬಳಲುತ್ತಿರುವ ಉದ್ಯೋಗಿಗಳ ಬಗ್ಗೆ ಅಗತ್ಯವಾದಂಥ ಮುನ್ಸೂಚನೆಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ ಮಾರುಕಟ್ಟೆ ಮಾಲೀಕರ ಸಂಘವು ಈ ರೀತಿಯ ಜನಸಮುದಾಯವನ್ನು ಸಾರ್ವಜನಿಕ ಸಂಪರ್ಕದಿಂದ ದೂರ ಇರಲು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲು ಸಲಹೆ ನೀಡಲಾಗಿದೆ.

3. **ಕೋವಿಡ್-19 ಕ್ಕೆ ಸಂಬಂಧಿಸಿದಂತೆ ಸೂಕ್ತವಾದ ನಡವಳಿಕೆಗಳ ಸಂವರ್ಧನೆ:** ಸಾಮಾನ್ಯ ಸಾರ್ವಜನಿಕ ಆರೋಗ್ಯದ ಉಪ ಕ್ರಮಗಳನ್ನು ಪಾಲಿಸುವುದರಿಂದ ಕೋವಿಡ್-19 ಸರ್ವವ್ಯಾಪಿ ಸಾಂಕ್ರಾಮಿಕ ರೋಗದ ಪ್ರಸರಣವನ್ನು ತಡೆಗಟ್ಟಬಹುದಾಗಿದೆ ಈ ಮುನ್ನೆಚ್ಚರಿಕ್ತಾ ಕ್ರಮಗಳನ್ನು ಅಂಗಡಿ ಮಳಿಗೆಗಳ ಮಾಲೀಕರು, ಗ್ರಾಹಕರು, ಸಂದರ್ಶಕರು ಕಾರ್ಮಿಕರು ಮತ್ತು ಇತರ ಜನರು ನಿಯಮಿತವಾಗಿ ಯಾವಾಗಲೂ ಪಾಲಿಸಲು ಸೂಚಿಸಲಾಗಿದೆ.

ಈ ಕ್ರಮಗಳೆಂದರೆ

- ಕನಿಷ್ಠ 6ಅಡಿಗಳ ಬೌದ್ಧಿಕ ಅಂತರವನ್ನು ಕಾಯ್ದುಕೊಳ್ಳುವುದು
- ಮುಖಗವುಸು ಗಳು ಮತ್ತು ಕೈಗವಸುಗಳನ್ನು ಕಡ್ಡಾಯವಾಗಿ ಬಳಸುವುದು.
- ನಿಯಮಿತವಾಗಿ ಕಾಲಕಾಲಕ್ಕೆ ದ್ರವರೂಪದ ಮಾರ್ಜಕದಿಂದ ಕನಿಷ್ಠ ನಲವತ್ತು ರಿಂದ ಅರುವತ್ತು ಸೆಕೆಂಡುಗಳ ಕಾಲ ಕೈಯನ್ನು ಸ್ವಚ್ಛಗೊಳಿಸುವುದು ಹಾಗೂ ಒಂದು ಪಕ್ಷ ಕೈ ಸ್ವಚ್ಛವಾಗಿದ್ದರೂ ಕೂಡ ಕೈಯನ್ನು ಕೂಡ ನಿಯಮಿತವಾಗಿ ತೊಳೆಯುವುದು. ಮದ್ಯಸಾರಯುಕ್ತ ಸ್ಯಾನಿಟೈಸರ್ ಗಳನ್ನು ಬಳಕೆ ಮಾಡಲು ಉತ್ತೇಜಿಸುವುದು.
- ಕೆಮ್ಮುವಾಗ ಮತ್ತು ಸೀನುವಾಗ ಬಾಯಿ ಮತ್ತು ಮೂಗನ್ನು ಟಿಶ್ಯೂ ಪೇಪರ್ ಅಥವಾ ಕರವಸ್ತ, ಅಥವಾ ಮೊಣಕೈನಿಂದ ಮುಚ್ಚುವಂತಹ ಕೆಮ್ಮಿನ ಸಭ್ಯತೆಯನ್ನು ಕಾಯ್ದುಕೊಳ್ಳಲು ಸೂಚಿಸುವುದು ಮತ್ತು ಖಾತ್ರಿಪಡಿಸಿಕೊಳ್ಳುವುದು ಬಳಸಿದ ಟಿಶ್ಯೂ ಪೇಪರನ್ನು ಮುಚ್ಚಿದ ಕಸದ ಬುಟ್ಟಿಯಲ್ಲಿ ಹಾಕಲು ತಿಳಿಸಬೇಕು.
- ಆರೋಗ್ಯ ವನ್ನು ಸ್ವಯಂ ನಿಗಾವಣೆ ಮಾಡಿಕೊಳ್ಳಬೇಕು ಮತ್ತು ಯಾವುದೇ ರೀತಿಯ ಅನಾರೋಗ್ಯ ಪರಿಸ್ಥಿತಿ ಉಂಟಾದಾಗ ತ್ವರಿತಗತಿಯಲ್ಲಿ ಆಪ್ತಮಿತ್ರ ಸಹಾಯವಾಣಿ 14410ಗೆ ಕರೆ ಮಾಡಲು (ಬೆಳಿಗ್ಗೆ 8 ರಿಂದ ರಾತ್ರಿ 9 ಗಂಟೆ) ತಿಳಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
- ಆರೋಗ್ಯ ಸೇತು ಅಪ್ಲಿಕೇಶನನ್ನು ಎಲ್ಲಾ ಸಿಬ್ಬಂದಿಗಳು ಅನುಸ್ಥಾಪನೆ ಮಾಡಿಕೊಳ್ಳಲು ಸೂಚಿಸುವುದು ಮತ್ತು ಖಾತ್ರಿಪಡಿಸಿಕೊಳ್ಳುವುದು.

## 4. ಮಾರುಕಟ್ಟೆಗಳಲ್ಲಿ ಆರೋಗ್ಯಕರ ಪರಿಸರವನ್ನು ಕಾಯ್ದುಕೊಳ್ಳುವುದು:

ಕೋವಿಡ್-19 ರ ಪೂರ್ವಕಾಲದಲ್ಲಿ ಮಾರುಕಟ್ಟೆಗಳು ಸಾಮಾನ್ಯವಾಗಿ ಜನಸಂದಣಿಯಿಂದ ಕೂಡಿದ್ದು ಬಹುತೇಕ ಪ್ರದೇಶಗಳಲ್ಲಿ ಸೂಕ್ತ ಪ್ರಮಾಣದ ನೈರ್ಮಲ್ಯ ವ್ಯವಸ್ಥೆ ಇರುವುದಿಲ್ಲ, ಕೋವಿಡ್-19 ರ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ.ಪ್ರಸ್ತುತ ಮಾರುಕಟ್ಟೆಗಳಲ್ಲಿ ಇರುವ ಮೂಲಭೂತ ಸೌಕರ್ಯಗಳ ಮೌಲ್ಯಮಾಪನ ಮಾಡುವುದು ಅಗತ್ಯವಾಗಿದೆ.

- ಭೌತಿಕ ಸಂರಚನೆ ಮೂಲಭೂತ ಸೌಕರ್ಯಗಳನ್ನು ಕೋವಿಡ್-19 ರ ಮುನ್ನೆಚ್ಚರಿಕಾ ಕ್ರಮಗಳಾದ 2 ಮೀಟರ್ ಅಥವಾ 6ಅಡಿಗಳ ದೈಹಿಕ ಅಂತರವನ್ನು ಕಾಯ್ದುಕೊಳ್ಳಲು ಸೂಕ್ತವಾದ ಸ್ಥಳವಕಾಶ, ಗಾಳಿ ಬೆಳಕು ಬರಲು ಸೂಕ್ತವಾದ ವ್ಯವಸ್ಥೆ ಇತ್ಯಾದಿ. ಈ ರೀತಿಯ ಸೌಲತ್ತುಗಳನ್ನು ನೀಡುವ ಖಾತ್ರಿ ಪಡಿಸಿಕೊಳ್ಳಿ ಈ ರೀತಿಯ ವ್ಯವಸ್ಥೆ ಇಲ್ಲದಿದ್ದ ಸಂದರ್ಭದಲ್ಲಿ ಆಂತರಿಕವಾಗಿ ರಚನಾತ್ಮಕ ಬದಲಾವಣೆಗಳನ್ನು ಮಾಡಲು ತಿಳಿಸಬೇಕು ಮತ್ತು ಕೋವಿಡ್-19 ಸಾಮಾನ್ಯ ಸ್ಥಿತಿಗೆ ಬರುವ ತನಕ ಈ ಕ್ರಮಗಳನ್ನು ಪೂರೈಸಬೇಕಾಗಿದೆ.
- ಈ ಮೇಲ್ಕಂಡ ಅಗತ್ಯತೆಗಳನ್ನು ಪೂರೈಸದಿದ್ದಲ್ಲಿ ಆ ಅಂಗಡಿ ಮಳಿಗೆಗಳನ್ನು ಅತಿಕ್ರಮಣಕ್ಕಾಗಿ ನಿರೀಕ್ಷಿತ ಅಗತ್ಯಗಳಿಗನುಗುಣವಾಗಿ ಸೂಕ್ತ ಬದಲಾವಣೆಗಳನ್ನು ಮಾಡಲು ತಿಳಿಸಬೇಕು.
- ಎಲ್ಲಾ ಮಳಿಗೆಗಳು ಕಡ್ಡಾಯವಾಗಿ ಶಾಶ್ವತ ಸ್ಥಿತಿಯಲ್ಲಿರುವಂತೆ ಚೌಕಾಕಾರ ಅಥವಾ ವೃತ್ತಾಕಾರದ ಗುರುತುಗಳನ್ನು 2ಮೀಟರ್ ಅಥವಾ 6ಅಡಿಗಳ ದೈಹಿಕ ಅಂತರವನ್ನು ಎಲ್ಲಾ ಸಂಧರ್ಭದಲ್ಲಿ ಕಾಯ್ದುಕೊಳ್ಳಲು ಮಾಡಬೇಕು.
- ಮಳಿಗೆಗಳ ಮಾಲೀಕರು ದೈನಂದಿನ ಚಟುವಟಿಕೆಗಳನ್ನು ಆರಂಭಿಸುವ ಮುನ್ನ ಶೇಕಡಾ 1ರಷ್ಟು ಪ್ರಮಾಣದ ಸೋಡಿಯಂ ನೈಟ್ರೇಟ್ ದ್ರಾವಣದಿಂದ ಅಥವಾ ಗೃಹ ಬಳಕೆಯ ಮಾರ್ಜಕದಿಂದ ಮಳಿಗೆಯನ್ನು ಶುಚಿಗೊಳಿಸಬೇಕು.
- ಸ್ವಚ್ಛತೆ ಮತ್ತು ನಿಯಮಿತವಾದ ಸೋಂಕು ನಿವಾರಣೆ ಕ್ರಮಗಳನ್ನು ಸಾಮಾನ್ಯವಾಗಿ ಮುಟ್ಟುವ ಮೇಲ್ಮೆ ಪ್ರದೇಶಗಳು(ಬಾಗಿಲ ಈಡಿಗಳು,ಕೈ ಹಿಡಿಗಳು, ಏರಿಳಿ ತೇರುಗಳ ಗುಂಡಿಗಳು, ಕುರ್ಚಿಗಳು ಟೇಬಲ್ ಮೇಲ್ಮೈ, ಕೌಂಟರ್) ಮತ್ತು ಅದೇ ರೀತಿ ನೆಲ ಮತ್ತು ಗೋಡೆಗಳನ್ನು ಮಳಿಗೆಗಳನ್ನು ತೆರೆಯುವ ಮುನ್ನ ಹಾಗೂ ಮುಚ್ಚುವ ಮುನ್ನ ಮಾಡಬೇಕು.
- ಮಳಿಗೆಗಳ ಪ್ರವೇಶದ್ವಾರದಲ್ಲಿ ಸ್ಯಾನಿಟೈಜರ್ ಬಾಟಲಿಗಳನ್ನು ಇಡಲು ಅಗತ್ಯವಾದ ವ್ಯವಸ್ಥೆಗಳನ್ನು ಮಾಡಬೇಕು. ಗ್ರಾಹಕರು ಮಳಿಗೆಗಳನ್ನು ಪ್ರವೇಶಿಸುವ ಮುನ್ನ ಅವರ ಕೈಗಳನ್ನು ಶುಚಿಗೊಳಿಸಲು ತಿಳೀಸಬೇಲು.
- ವ್ಯಾಲೆಟ್ ಪಾರ್ಕಿಂಗ್ ಜಾಗದಲ್ಲಿ ಕಾರುಗಳನ್ನು ನಿಲ್ಲಿಸುವ ಹಾಗೂ ಹೊರತೆಗೆಯುವ ಮುನ್ನ ಚಾಲನಾ ಚಕ್ರ (ಸ್ಟೀರಿಂಗ್ ವೀಲ್), ಬಾಗಿಲ ಹಿಡಿಗಳು, ಕೀಲಿಗಳನ್ನು ಸೋಂಕು ನಿವಾರಣೆ ಮಾಡಬೇಕು, ಮತ್ತೆ ಮರುಬಳಕೆ ಮುನ್ನ ಸೋಂಕು ನಿವಾರಣೆಯಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ಸಾರ್ವಜನಿಕ ಪ್ರದೇಶಗಳನ್ನು ನಿಯಮಿತವಾಗಿ ಶೇ.1 ರ ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಿಂದ ಶುಚಿಗೊಳಿಸಬೇಕು.

- ಪ್ರತಿ ದಿನ 3-4 ಬಾರಿ ಕುಡಿಯುವ ನೀರಿನ ಘಟಕ, ಕೈ ತೊಳೆಯುವ ಪ್ರದೇಶಗಳು ಮತ್ತು ಶೌಚಾಲಯಗಳನ್ನು ಶುಚಿಗೊಳಿಸಬೇಕು.

ಮಾರುಕಟ್ಟೆ ಸಂಘಟನೆಗಳು ಸ್ಥಳಿಯ ನಗರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಸಾರ್ವಜನಿಕ ಪ್ರದೇಶಗಳಲ್ಲಿ ಆರೋಗ್ಯ ಕರ ವಾತಾವರಣವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಕಾಲಕಾಲಕ್ಕೆ ವೈಯುಕ್ತಿಕ ಆಸ್ಥೆಯನ್ನು ವಹಿಸಿ ಅಗತ್ಯ ಕ್ರಮಗಳನ್ನು ವಹಿಸುವುದು, ವಿವರವಾದ ಮಾರ್ಗಸೂಚಿಗಳು ಮುಂದಿನ ಜಾಲತಾಣದಲ್ಲಿ ಲಭ್ಯವಿವೆ. (https://www.mohfw.gov.in/pdf/Guidelinesondisinfectionofcommonpublicplacesincludingoffices.pdf)

## 5. ಮಾರುಕಟ್ಟೆ ಪ್ರದೇಶದಲ್ಲಿ ಕೋವಿಡ್-19 ಕ್ಕೆ ಸಂಬಂಧಿಸಿದ ಸೂಕ್ತ ನಡವಳಿಕೆಗಳು:

### 5.1 ಮಾರುಕಟ್ಟೆ ಪ್ರದೇಶಗಳಲ್ಲಿ ಕೋವಿಡ್-19 ಕ್ಕೆ ಸಂಬಂಧಿಸಿದ ಸ್ವಯಂ ನಿಯಂತ್ರಣ ನಡವಳಿಕೆಗಳು.

ಮಾರುಕಟ್ಟೆ ಪ್ರದೇಶಗಳಲ್ಲಿ ಕೋವಿಡ್-19 ಕ್ಕೆ ಸಂಬಂಧಿಸಿದ ಸೂಕ್ತವಾದ ನಡವಳಿಕೆಗಳನ್ನು ಅನುಸರಿಸಲು ಹಾಗೂ ಪಾಲನೆ ಮಾಡುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಸ್ವಯಂ ನಿಗಾವಣೆ ಮಾಡಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕು.

- ನಿಯಮಿತವಾದ ನಿಗಾವಣೆಯನ್ನು ಮಾಡಲು ಮಾರುಕಟ್ಟೆ ಮಾಲೀಕರ ಸಂಘಟನೆಯವರು ಉಪಸಮಿತಿಗಳನ್ನು ರಚಿಸಬೇಕು. ಇವುಗಳು ಅಂಗಡಿ ಮಳಿಗೆಗಳ ವ್ಯಾಪ್ತಿಯಲ್ಲಿ ಅಥವಾ ವಾಣಿಜ್ಯ ಸಂಕೀರ್ಣ ಅಥವಾ ಮಾರುಕಟ್ಟೆಯ ಆವರಣದಲ್ಲಿ ರಬಹುದು.
- ಪ್ರವೇಶ ದ್ವಾರದಲ್ಲಿ ಅಥವಾ ಪಾರ್ಕಿಂಗ್ ಜಾಗದಲ್ಲಿ ಮುಖಗವುಸುಗಳನ್ನು ಪಡೆಯುವ ವ್ಯವಸ್ಥೆಯಾಗಬೇಕು.
- ಮುಖಗವಸುಗಳನ್ನು ಖರೀದಿಸಲು ಸಾಧ್ಯವಿಲ್ಲದವರಿಗೆ ಉಚಿತವಾದ ಮುಖಗವಸುಗಳನ್ನು ನೀಡುವುದು ಮತ್ತು ಇದನ್ನು ಬಳಕೆ ಮಾಡಲು ಉತ್ತೇಜಿಸಬೇಕು,
- ಸಾರ್ವಜನಿಕ ಬಳಕೆ ಜಾಗದಲ್ಲಿ ಕೈ ತೊಳೆಯಲು ಅಗತ್ಯವಾದ ವ್ಯವಸ್ಥೆಯನ್ನು ಮಾಡಬೇಕು ಮತ್ತು ದ್ರವರೂಪದ ಮಾರ್ಜಕ ಹಾಗೂ ನೀರಿನ ವ್ಯವಸ್ಥೆಯನ್ನು ಲಭ್ಯಗೊಳಿಸಬೇಕು ಹಾಗೂ ಸಂಪರ್ಕರಹಿತವಾಗಿ ಸೋಪನ್ನು ಪಡೆಯಲು ಕಾಲಿನಿಂದ ಚಾಲನೆಗೊಳಿಸುವ ಸ್ಟ್ಯಾಂಡ್ ಗಳನ್ನು ಅಳವಡಿಸಬೇಕು.
- ಮಾರುಕಟ್ಟೆಯ ಆಗಮನದ ದ್ವಾರ ಹಾಗೂ ಇನ್ನಿತರ ಪ್ರವೇಶ ದ್ವಾರಗಳಲ್ಲಿ ಸಾಮೂಹಿಕ ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆಯಾಗಬೇಕು.
- ಸಾರ್ವಜನಿಕ ಪ್ರದೇಶಗಳಲ್ಲಿ ನೈರ್ಮಲೀಕರಣ ಮತ್ತು ಸೋಂಕು ನಿವಾರಣಾ ಕ್ರಮಗಳನ್ನು ಅನುಸರಿಸಲು ಥರ್ಮಲ್ ಸ್ಕ್ಯಾನರ್ ಸ್ಯಾನಿಟೈಜರ್ ಮತ್ತು ಸೋಂಕು ನಿವಾರಕ ವಸ್ತುಗಳನ್ನು ಖರೀದಿ ಮಾಡಬೇಕು.
- ಕೋವಿಡ್-19 ಕ್ಕೆ ಸಂಬಂಧಿಸಿದ ನಡವಳಿಕೆಗಳ ಕುರಿತಾಗಿ ಐಇಸಿ ಸಾಮಗ್ರಿಗಳು ಮತ್ತು ಸೈನೈಜ್ ಬೋರ್ಡ್ ಗಳನ್ನು ಜನನಿಬಿಡ ಸ್ಥಳಗಳಲ್ಲಿ ಅಳವಡಿಸಬೇಕು.

4

**5.2 ನಿಯಂತ್ರಣ ಪ್ರಾಧಿಕಾರಿಗಳಿಂದ ಕೋವಿಡ್-19 ಕ್ಕೆ ಸಂಬಂಧಿಸಿದ ಸೂಕ್ತ ನಡವಳಿಕೆಗಳನ್ನು ಜಾರಿಗೊಳಿಸುವುದು.**

ಕೋವಿಡ್-19ಕ್ಕೆ ಸಂಬಂಧಿಸಿದಂತೆ ಸ್ವಯಂ-ನಿಗಾವಣೆಗೆ ಸೂಕ್ತವಾದ ನಡವಳಿಕೆಗಳನ್ನು ಅಳವಡಿಸಿಕೊಳ್ಳಲು ವಿಫಲವಾದಲ್ಲಿ ಅಥವಾ ಪರಿಣಾಮಕಾರಿಯಾಗದಿದ್ದಲ್ಲಿ ಪರಿಣಾಮಕಾರಿ ಜಾರಿ ಪ್ರಕ್ರಿಯೆಗಳನ್ನು ಅಗತ್ಯವಿರುವೆಡೆ ಅನುಷ್ಠಾನ ಮಾಡಬೇಕಾಗಿದೆ ಅನುಷ್ಠಾನ ಮಾಡಬೇಕಾದ ಕ್ರಮಗಳಲ್ಲಿ ಕೆಳಗಿನ ಅಂಶಗಳು ಸೇರಿವೆ.

- ದೈಹಿಕ ಅಂತರದ ಮಾನದಂಡಗಳನ್ನು ಪಾಲನೆ ಮಾಡದಿರುವವರಿಗೆ ಹಾಗೂ ಮುಖಗವಸನ್ನು ಧರಿಸದಿರುವವರಿಗೆ ದಂಡ ವಿಧಿಸುವುದು. .
- ದಿನಬಿಟ್ಟು ದಿನ ಮಾರುಕಟ್ಟೆ/ ಮಳಿಗೆ ತೆರೆಯಲು ಇರುವ ಕ್ರಮಗಳನ್ನು ಆಲೋಚಿಸುವುದು.
- ಹೆಚ್ಚಿನ ಪ್ರಮಾಣದ ಪ್ರಕರಣಗಳು ವರದಿಯಾದ ಸಂದರ್ಭದಲ್ಲಿ ಮಾರುಕಟ್ಟೆಗಳನ್ನು ಮುಚ್ಚುವುದು ಮತ್ತು ರೋಗ ಕ್ಕೆ ಸಂಬಂಧಿಸಿದ ಮೂಲಗಳನ್ನು ಹುಡುಕುವುದು.

5.3 **ಮಾರುಕಟ್ಟೆಯಲ್ಲಿ ಅಂಗಡಿ ಮಾಲೀಕರು/ಮೂಲಭೂತ ವ್ಯವಸ್ಥೆಯ ಚಾಲನಾ ಸಿಬ್ಬಂದಿಗಳಿಂದ ಕೋವಿಡ್-19 ನಡವಳಿಕೆಗಳನ್ನು ಖಾತ್ರಿಪಡಿಸಿಕೊಳ್ಳಲು ಯೋಜನೆಗಳು:**

ಮಾಲೀ ಕರು ಕೆಳಕಂಡ ಕ್ರಮಗಳನ್ನು ಖಾತ್ರಿಪಡಿಸಬೇಕು.

- ಮಳಿಗೆಗಳ ಒಳಗೆ ಮತ್ತು ಹೊರಗೆ ಕನಿಷ್ಠ 6ಅಡಿಗಳ ದೈಹಿಕ ಅಂತರವನ್ನು ಕಾಯ್ದುಕೊಳ್ಳಲು ಸೂಕ್ತವಾದ ಗುರುತುಗಳನ್ನು ಮಳಿಗೆಯ ಒಳಗೆ ಮತ್ತು ಹೊರಗೆ ಅಥವಾ ಸೌಲಭ್ಯಗಳಿರುವೆಡೆ ಮಾಡಬೇಕು.
- ಮಳಿಗೆಯ ಒಳಗೆ ಮತ್ತು ಹೊರಗೆ ಅಥವಾ ಸೌಲಭ್ಯಗಳಿರುವೆಡೆ ಸಾಲಾಗಿ ನಿಲ್ಲುವ ವ್ಯವಸ್ಥೆಯನ್ನು ಮಾಡಿಸಬೇಕು.
- ಸಾಲಾಗಿ ನಿಲ್ಲಿಸಲು ಮತ್ತು ದೈಹಿಕ ಅಂತರವನ್ನು ನಿಯಮಾನುಸಾರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸೂಕ್ತವಾದ ಸಿಬ್ಬಂದಿಗಳನ್ನು ಈ ಕ್ರಮಗಳನ್ನು ನಿಗಾವಣೆ ಮಾಡಲು ನಿಯೋಜನೆ ಮಾಡಬೇಕು.
- ಮಳಿಗೆಗಳು ಮತ್ತು ಈ ಸಾರ್ವಜನಿಕ ಸ್ಥಳಗಳಿಗೆ ಆಗಮಿಸುವ ಗ್ರಾಹಕರು ಮುಖಗವಸು ಧರಿಸದ ಸಂಧರ್ಭದಲ್ಲಿ ಟ್ರಿಪಲ್ ಲೇಯರ್ ಮುಖಗವಸುಗಳು/ಫೇಸ್ ಕವರ್ ಗಳ ವ್ಯವಸ್ಥೆ ಮಾಡಬೇಕು.
- ಮಳಿಗೆ ಅಥವಾ ವಾಣಿಜ್ಯ ಸಂಕೀರ್ಣದ ಪ್ರವೇಶ ದ್ವಾರದಲ್ಲಿ ಹ್ಯಾಂಡ್ ಸ್ಯಾನಿಟೈಜರ್ ಇಡುವುದು, ಗ್ರಾಹಕರು ಮತ್ತು ಕೆಲಸಗಾರರ ದೇಹದ ತಾಪಮಾನವನ್ನು ಅಳೆಯಲು ಥರ್ಮಲ್ ಸ್ಕ್ಯಾನರ್ ವ್ಯವಸ್ಥೆಯನ್ನು ಮಾಡಬೇಕು.
- ಸಂಪರ್ಕ ರಹಿತ ಪಾವತಿ ವ್ಯವಸ್ಥೆಗೆ ಸೂಕ್ತವಾದ ವ್ಯವಸ್ಥೆಗಳನ್ನು ಮಾಡಬೇಕು.

5.4 **ಸ್ವಾಭಾವಿಕ ಗಾಳಿ ಬೆಳಕಿನ ವ್ಯವಸ್ಥೆ ಖಾತರಿ ಪಡಿಸಿಕೊಳ್ಳುವುದು** :

- ಸೂಕ್ತ ಗಾಳಿ ಬೆಳಕಿನ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಖಾತ್ರಿಪಡಿಸಿಕೊಳ್ಳಬೇಕು. ಸಣ್ಣದಾದ ಹಾಗೂ ಕಿರಿದಾದ ಸಂಚಲನಾ ಪ್ರದೇಶಗಳನ್ನು ಉತ್ತೇಜಿಸಬಾರದು.
- ಬಾಗಿಲು ಮತ್ತು ಕಿಟಕಿಗಳನ್ನು ತೆರೆಯುವ ಮುಖೇನ ಹೊರಾವರಣದಿಂದ ಗಾಳಿಯ ಸಂಚಲನೆಯನ್ನು ಹೆಚ್ಚಿಸಬೇಕು, ಸಾಧ್ಯವಾದಷ್ಟು ಫ್ಯಾನ್ ಗಳು ಅಥವಾ ಇನ್ನಿತರ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.
- ಹವಾನಿಯಂತ್ರಿತ ವ್ಯವಸ್ಥೆ/ಗಾಳಿ ಬೆಳಕು/ಮುಚ್ಚಿದ ಪ್ರದೇಶಗಳಲ್ಲಿ ಸಿಪಿಡಬ್ಲ್ಯುಡಿ ಮಾರ್ಗಸೂಚಿಗಳನ್ನು ಪಾಲಿಸಬೇಕು. ಈ ಮಾರ್ಗಸೂಚಿಯಲ್ಲಿ ಹವಾನಿಯಂತ್ರಿತ ವ್ಯವಸ್ಥೆಯ ಉಪಕರಣದಲ್ಲಿ 24-30$^0$ ಸೆಂಟಿಗ್ರೇಡ್ ವರೆಗೆ ತಾಪಮಾನವನ್ನೂ ಮತ್ತು ಶೇ.40-70 ರ ವರೆಗೆ ಆರ್ದ್ರತೆಯನ್ನು ಕಾಯ್ದುಕೊಳ್ಳವುದು, ಶುದ್ಧವಾದ ಗಾಳಿಯು ಒಳಬರಲು ಅಗತ್ಯವಾದ ವ್ಯವಸ್ಥೆಯನ್ನು ಮಾಡುವುದು ಹಾಗೂ ಗಾಳಿಯ ನಿರ್ವಹಣಾ ಘಟಕಗಳನ್ನು ಚಾಲನೆ ಮಾಡುವ ಮುನ್ನ ಸ್ವಚ್ಛಗೊಳಿಸುವುದು. ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳು ಮುಂದಿನ ಜಾಲತಾಣದಲ್ಲಿ ಲಭ್ಯವಿವೆ. (https://cpwd.gov.in/WriteReadData/other_cir/45567.pdf)

5.5 **ಜನಸಂದಣಿಯ ನಿರ್ವಹಣೆ**:

ಜನಸಂದಣಿಯ ವಾರಪೂರ್ತಿ ಸಾಮಾನ್ಯವಾಗಿರುವುದಿಲ್ಲ ಸಾಮಾನ್ಯವಾಗಿ ಸಂಜೆ ಅವಧಿಯಲ್ಲಿ ಮತ್ತು ವಾರಾಂತ್ಯದ ದಿನಗಳಲ್ಲಿ ಮತ್ತು ರಜಾ ದಿನಗಳಲ್ಲಿ ಮಾರುಕಟ್ಟೆಗಳು ಹೆಚ್ಚಾಗಿ ಜನಸಂದಣಿಯಿಂದ ಕೂಡಿದ್ದು. ಸಂಜೆಯವರೆಗೆ ತೆರೆದಿರುತ್ತವೆ. ಈ ಜನಸಂದಣಿಯನ್ನು ನಿರ್ವಹಣೆ ಮಾಡಲು ಸೂಕ್ತವಾದ ಕ್ರಮಗಳನ್ನು ಅಗತ್ಯಕ್ಕನುಗುಣವಾಗಿ ಯೋಜಿಸಬೇಕು. ಆಲೋಚಿಸದೆ ಮಾರುಕಟ್ಟೆಯ ಸಂಘಟನೆಗಳು ಮತ್ತು ಜಾರಿ ಸಂಸ್ಥೆಗಳ ಸಹಯೋಗದೊಂದಿಗೆ ವಿವಿಧ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ ಈ ಕಾರ್ಯ ತಂತ್ರಗಳೆಂದರೆ:

- ಜನಸಂದಣಿಯ ನಿರ್ವಹಣೆಗೆ ಸಾರ್ವಜನಿಕ ರಕ್ಷಣಾ ಸ್ವಯಂಸೇವಕರಾದ ಮಾರ್ಷಲ್ ಗಳು ಗೃಹರಕ್ಷಕ ದಳಗಳು ಮತ್ತು ಸ್ವಯಂಸೇವಕರ ಸೇವೆಗಳನ್ನು ಬಳಸಿಕೊಳ್ಳುವುದು.
- ಪಾರ್ಕಿಂಗ್ ಜಾಗದಲ್ಲಿ ನಿಯಮಿತವಾಗಿ ಸೀಮಿತ ವಾಹನಗಳ ಆಗಮನವನ್ನು ನಿಯಂತ್ರಿಸುವುದು
- ಪ್ರತ್ಯೇಕವಾದ ಆಗಮನ ಮತ್ತು ನಿರ್ಗಮನ ವ್ಯವಸ್ಥೆ ಸಾಧ್ಯವಾದಲ್ಲಿ ಏಕ ಮುಖ ವ್ಯವಸ್ಥೆ.
- ಮಾರುಕಟ್ಟೆ ರಸ್ತೆಯ ಬದಿಯನ್ನು ವಾಹನ ಮುಕ್ತಗೊಳಿಸಬೇಕು. ಈ ಪ್ರದೇಶವನ್ನು ಪಾದಚಾರಿಗಳು ಮತ್ತು ಸೈಕಲ್ ಬಳಕೆಗೆ ಸೀಮಿತಗೊಳಿಸಬೇಕು.
- ಅನಧಿಕೃತ ಪಾರ್ಕಿಂಗ್ ಮಾಡಿದಂಥ ಸಂದರ್ಭದಲ್ಲಿ ಕಾನೂನು ಜಾರಿ ಅಧಿಕಾರಿಗಳಿಂದ ಕಡ್ಡಾಯವಾಗಿ ದಂಡವನ್ನು ವಿಧಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.
- ವಾಹನಗಳಿಗೆ ನಿರ್ದಿಷ್ಟಪಡಿಸಿದ ಪಾರ್ಕಿಂಗ್ ಲಾಟ್ ಗಳಲ್ಲಿ ಮಾತ್ರ ಅವಕಾಶ ನೀಡಬೇಕು. ಪಾರ್ಕಿಂಗ್ ಸ್ಥಳಗಳು ಮತ್ತು ವಾಣಿಜ್ಯ

ಮಳಿಗೆಗಳ ಆವರಣದಲ್ಲಿ ಜನರ ವ್ಯವಸ್ಥಿತ ನಿರ್ವಹಣೆಯಾಗಬೇಕು ಮತ್ತು ದೈಹಿಕ ಅಂತರದ - ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

- ಸಿಸಿ ಟಿವಿ ಕಣ್ಗಾವಲು ವ್ಯವಸ್ಥೆಯನ್ನು ಅತಿ ಹೆಚ್ಚು ಜನಸಂದಣಿ ಪ್ರದೇಶವನ್ನು ಗುರುತಿಸಲು ಪರಿಗಣಿಸಬೇಕು.
- ಪಾಳಿಯ ಅವಧಿಯಲ್ಲಿ ಅಂಗಡಿಗಳನ್ನು ತೆರೆಯಲು ಆಲೋಚಿಸಬೇಕು ಹಾಗೂ ಹೆಚ್ಚಿನ ಸಮಯದವರೆಗೆ ತೆರೆಯಲು ಅವಕಾಶ ನೀಡಬೇಕು.
- ಮೆಟ್ರೋ ರೈಲು ನಿಲ್ದಾಣಗಳಿಂದ ನೇರವಾಗಿ ಮಾರುಕಟ್ಟೆಗೆ ಹೋಗಲು ಅವಕಾಶ ವಿರುವೆಡೆ ಪರಿಣಾಮಕಾರಿಯಾಗಿ ಜನಸಂದಣಿ ನಿರ್ವಹಣೆಯನ್ನು ಮಾಡಬೇಕು.
- ದೈನಂದಿನ ಬಳಕೆಯ ವಸ್ತುಗಳನ್ನು ಖರೀದಿ ಮಾಡಲು ಆನ್ ಲೈನ್ ವ್ಯವಸ್ಥೆಯನ್ನು ಉತ್ತೇಜಿಸಬೇಕು, ಮನೆಬಾಗಿಲಿಗೆ ಈ ಸಾಮಗ್ರಿಗಳ ಪೂರೈಕೆಯನ್ನು ಉತ್ತೇಜಿಸಬೇಕು. ಮನೆ ಬಾಗಿಲಿಗೆ ಸಾಮಗ್ರಿಗಳನ್ನು ಪೂರೈಸುವ ಮುನ್ನ ಸಾಮಗ್ರಿಗಳ ಪೂರೈಕಾ ಸಿಬ್ಬಂದಿಗಳನ್ನು ವ್ಯಾಪಾರಿಗಳು/ಮಾಲಿಕರು ಥರ್ಮಲ್ ಸ್ಕ್ಯಾನರ್ ಮುಖೇನ ಅವನ ಆರೋಗ್ಯ ತಪಾಸಣೆಯನ್ನು ತಪಾಸಣೆ ಮಾಡಬೇಕು.
- ಒತ್ತಡ ರಹಿತ ಅವಧಿಗಳಲ್ಲಿ ಖರೀದಿಗೆ ಬರುವ ಗ್ರಾಹಕರಿಗೆ ಪ್ರೋತ್ಸಾಹ ಧನ ಅಥವಾ ವಿನಾಯಿತಿಯನ್ನು ನೀಡುವುದನ್ನು ಉತ್ತೇಜಿಸಬೇಕು.

5.6 **ಜಾಗೃತಿ ಕ್ರಮಗಳು** :

- ಕೋವಿಡ್-19 ಕ್ಕೆ ಸಂಬಂಧಿಸಿದ ಮುನ್ನೆಚ್ಚರಿಕೆ ಕ್ರಮಗಳ ಕುರಿತಾಗಿ ಜನಸಂದಣಿಯ ಪ್ರದೇಶಗಳಲ್ಲಿ ಅನುಸರಿಸಬೇಕಾದ ಮತ್ತು ಅನುಸರಿಸಬಾರದ ಕ್ರಮಗಳ ಕುರಿತಾಗಿ ಭಿತ್ತಿಪತ್ರಗಳು, ಸ್ಟ್ಯಾಂಡಿಗಳು ದೃಶ್ಯ ಆಧಾರಿತ ಮತ್ತು ಧ್ವನಿ ಮುದ್ರಿತ ಸಂದೇಶಗಳನ್ನು ಬಿತ್ತರಿಸಬೇಕು.
- ಧ್ವನಿ ಮುದ್ರಿತ ಸಂದೇಶಗಳನ್ನು ಸೂಕ್ತವಾದ ಸಮಯದಲ್ಲಿ ಮಾರುಕಟ್ಟೆ ಪ್ರದೇಶದಲ್ಲಿ ಅಳವಡಿಸಿರುವ ಧ್ವನಿವರ್ಧಕ ವ್ಯವಸ್ಥೆಯ ಮುಖೇನ ಉದ್ಘೋಷಣೆ ಮಾಡಿಸಬೇಕು.
- ಮಾರುಕಟ್ಟೆ ಅಥವಾ ಮಳಿಗೆಗಳು ಜಾಲತಾಣಗಳನ್ನು ಹೊಂದಿದ್ದರೆ ತಮ್ಮ ಮುಖಪುಟದಲ್ಲಿ ಕೋವಿಡ್-19 ಕ್ಕೆ ಸಂಬಂಧಿಸಿದ ಸಂದೇಶ ಬಿತ್ತರಿಸಲು ಹಾಗೂ ಗ್ರಾಹಕರಿಗೆ ಜಾಲತಾಣ ಅಥವಾ ಮೊಬೈಲ್ ಅಪ್ಲಿಕೇಶನ್ ಬಗ್ಗೆ ತಿಳಿಸಬೇಕು ಮತ್ತು ಆರೋಗ್ಯದ ಸ್ವಯಂ ನಿಗಾವಣೆಯನ್ನು ಮಾಡಿಕೊಳ್ಳುವ ಬಗ್ಗೆ ತಿಳಿಸಬೇಕು. ಕೋವಿಡ್-19 ರ ರೋಗ ಲಕ್ಷಣಗಳಿದ್ದರೆ ಮಾರುಕಟ್ಟೆಗೆ ಬರುವುದನ್ನು ಉತ್ತೇಜಿಸಬಾರದು.
- ರಾಜ್ಯ ಸರ್ಕಾರದ ಸುಂಕ ರಹಿತ ಸಹಾಯವಾಣಿ " ಆಪ್ತಮಿತ್ರ ದೂರವಾಣಿ ಸಂಖ್ಯೆ 14410 ಮತ್ತು ಸ್ಥಳೀಯ ಆರೋಗ್ಯ ಪ್ರಾಧಿಕಾರಿ ದೂರವಾಣಿ ಸಂಖ್ಯೆಗಳನ್ನು ಜನ ಸಂದಣಿ ಪ್ರದೇಶಗಳಲ್ಲಿ ಬಿತ್ತರಿಸಬೇಕು.

5.7 **ಕೋವಿಡ್-19 ಕ್ಕೆ ಸಂಬಂಧಿಸಿದ ಸಾಮಗ್ರಿಗಳ ಲಭ್ಯತೆ** :

- ವೈಯಕ್ತಿಕ ಸುರಕ್ಷಿತ ಉಪಕರಣಗಳಾದ ಮುಖಗವಸು ಅಥವಾ ಫೇಶ್ ಕವರ್, ಫೇಶ್ ಶೀಲ್ಡ್, , ಕೈಗವಸುಗಳು ಮತ್ತು ಇನ್ನಿತರ ಸಾಮಗ್ರಿಗಳಾದ ಹ್ಯಾಂಡ್ ಸ್ಯಾನಿಟೈಜರ್ ದ್ರವರೂಪದ ಸೋಪು ಸೋಡಿಯಂ ಹೈಪೊಕ್ಲೋರೈಟ್ ಇತ್ಯಾದಿಗಳನ್ನು ಅವಶ್ಯಕತೆಯನ್ನು ಗ್ರಾಹಕರ ಅಗತ್ಯಕ್ಕನುಗುಣವಾಗಿ ವ್ಯವಸ್ಥೆ ಮಾಡಬೇಕು. ಇದೇ ಸಾಮಗ್ರಿಗಳನ್ನು

ಮಾರುಕಟ್ಟೆ ಸಂಘಟನೆಯವರು ಸಾರ್ವಜನಿಕ ಪ್ರದೇಶಗಳ ಶುಚಿತ್ವಕ್ಕಾಗಿ ಬಳಸಲು ಖರೀದಿಸಬೇಕು.

- ಸಾಕಷ್ಟು ಪ್ರಮಾಣದಲ್ಲಿ ಸುಸ್ಥಿತಿಯಲ್ಲಿರುವ ಥರ್ಮಲ್ ಸ್ಕ್ಯಾನರ್ ಗಳನ್ನು ನೀಡಬೇಕು.
- ಅಗತ್ಯಕ್ಕೆ ಅನುಗುಣವಾಗಿ ಮುಚ್ಚಳವಿರುವ ಕಸದ ತೊಟ್ಟಿಗಳನ್ನು ತ್ಯಾಜ್ಯ ನಿರ್ವಹಣೆಗೆ ಬಳಸಬೇಕು ಈ ಹಿನ್ನೆಲೆಯಲ್ಲಿ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಿಪಿಸಿಬಿ ಮಾರ್ಗಸೂಚಿಗಳನ್ನು ಅನುಸರಿಸಬೇಕು ಈ ಮಾರ್ಗಸೂಚಿಗಳು ಮುಂದಿನ ಜಾಲತಾಣದಲ್ಲಿ ಲಭ್ಯವಿದೆ.

6. **ಮಾರುಕಟ್ಟೆ ಮತ್ತು ಅಂಗಡಿ ಮಳಿಗೆಗಳಲ್ಲಿ ಆರೋಗ್ಯಕರ ಕ್ರಮಗಳ ನಿರ್ವಹಣೆ**:

- ಕೋವಿಡ್-19 ರೋಗಲಕ್ಷಣಗಳಾದ ಜ್ವರ ಕೆಮ್ಮು ಶೀತ ಗಂಟಲು ಕೆರೆತ ಮತ್ತು ಉಸಿರಾಟದ ತೊಂದರೆಯಂಥ ಲಕ್ಷಣಗಳನ್ನು ಹೊಂದಿರುವ ವ್ಯಕ್ತಿಗಳನ್ನು ವೈದ್ಯಕೀಯ ಸಲಹೆಗಳನ್ನು ಪಡೆಯಲು ಮತ್ತು ಇವರಿಗೆ ಕೋವಿಡ್-19 ಕ್ಕೆ ಸಂಬಂಧಿಸಿದ ಪರೀಕ್ಷೆಗೆ ಒಳಗಾಗಲು ಮಾರ್ಗದರ್ಶನ ನೀಡಬೇಕು. ಇಂತಹ ವ್ಯಕ್ತಿಗಳನ್ನು ಈ ಪ್ರದೇಶಗಳಿಗೆ ಬರುವುದನ್ನು ನಿಷೇಧಿಸಬೇಕು.
- ಮಳಿಗೆಗಳ ಮಾಲೀಕರು ಉದ್ಯೋಗಿಗಳು ಮತ್ತು ಗ್ರಾಹಕರು ಕಂಟೈನ್ ಮೆಂಟ್ ವಲಯದಲ್ಲಿ ವಾಸವಿದ್ದರೇ ಈ ಪ್ರದೇಶದ ವ್ಯಕ್ತಿಗಳನ್ನು ಮಾರುಕಟ್ಟೆ ಪ್ರದೇಶಕ್ಕೆ ಬರಲು ಅವಕಾಶ ನೀಡಬಾರದು.
- ಅಂಗಡಿ ಮಳಿಗೆಗಳ ಆಗಮನದ ದ್ವಾರದಲ್ಲಿ ಎಲ್ಲಾ ಉದ್ಯೋಗಿಗಳು ಗ್ರಾಹಕರಿಗೆ ಕಡ್ಡಾಯವಾಗಿ ಥರ್ಮಲ್ ಸ್ಕ್ಯಾನ್ ಮುಖಾಂತರ ದೇಹದ ತಾಪಮಾನವನ್ನು ಅಳೆಯಬೇಕು ಮತ್ತು ಕೈಯನ್ನು ಸ್ವಚ್ಛಗೊಳಿಸಲು ತಿಳಿಸಬೇಕು. ರೋಗರಹಿತ ಲಕ್ಷಣವಿರುವ ಉದ್ಯೋಗಿಗಳು ಗ್ರಾಹಕರು ಮಾತ್ರ ಅಂಗಡಿಯ ಒಳಿಗೆ ಒಳಗೆ ಮಾತ್ರ ಪ್ರವೇಶಿಸಲು ಅನುಮತಿ ನೀಡಬೇಕು.
- ಎಲ್ಲಾ ಉದ್ಯೋಗಿಗಳು ಮತ್ತು ಗ್ರಾಹಕರು ಫೇಸ್ ಕವರ್ ಮತ್ತು ಮುಖಗವಸನ್ನು ಧರಿಸಿದಾಗ ಮಾತ್ರ ಅವರಿಗೆ ಆವರಣವನ್ನು ಪ್ರವೇಶಿಸಲು ಅವಕಾಶ ನೀಡಬೇಕು ಮುಖಗವಸು ಅಥವಾ ಫೇಶ್ ಕವರ್ ನ್ನು ಕಡ್ಡಾಯವಾಗಿ ಅಂಗಡಿ ಮಳಿಗೆಯ ಹೊರಗೆ ಮತ್ತು ಒಳಗೆ ಎಲ್ಲಾ ಸಂಧರ್ಭದಲ್ಲೂ ಕಡ್ಡಾಯವಾಗಿ ಧರಿಸಿರಬೇಕು.
- 2 ಮೀಟರ್/ 6 ಅಡಿ ದೈಹಿಕ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಆಗಮನ ದ್ವಾರದಲ್ಲಿ ಗ್ರಾಹಕರನ್ನು ಸಾಲಿನಲ್ಲಿ ನಿಲ್ಲಿಸಿ ಪಾಳಿ/ಸರದಿಯ ಆಧಾರದ ಮೇಲೆ ಒಳಬಿಡಬೇಕು ಹಾಗೂ ವಿವಿಧ ಸಂಧರ್ಭದಲ್ಲಿ ಭೇಟಿ ನೀಡಲು ಉತ್ತೇಜಿಸಬೇಕು.
- ಅಂಗಡಿಯ ಮಳಿಗೆಯ ಒಳಗೆ ಆರು ಅಡಿ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕುರ್ಚಿ ಹಾಗೂ ಬೆಂಚುಗಳನ್ನು ಜೋಡಿಸಿ ಆಸನ ವ್ಯವಸ್ಥೆ ಮಾಡಬೇಕು.
- ಏರಿಳಿ ತೇರುಗಳಲ್ಲಿ ದೈಹಿಕ ಅಂತರವನ್ನು ಕಾಯ್ದುಕೊಳ್ಳುವ ಈ ತೇರುಗಳನ್ನು ಏರುವವರ ಸಂಖ್ಯೆಯನ್ನು ಸೀಮಿತಗೊಳಿಸಬೇಕು ಮತ್ತು ನೆಲದ ಮೇಲೆ ಗುರುತುಗಳನ್ನು ಹಾಕಬೇಕು.

- ಏರಿಳಿ ತೇರುಗಳಲ್ಲಿ ಒಟ್ಟು ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಒಂದು ಹಂತವನ್ನು ಬಿಟ್ಟು ಮತ್ತೊಂದು ಹಂತದ ಅಂತರವನ್ನು ಕಾಯ್ದುಕೊಳ್ಳಲು ಉತ್ತೇಜಿಸಬೇಕು.
- ಅಂಗಡಿ ಮಳಿಗೆಯ ವ್ಯಾಪಾರಿಗಳು ಮತ್ತು ಸಿಬ್ಬಂದಿಗಳು ಕಾಲ ಕಾಲಕ್ಕೆ ಕೈತೊಳೆಯುವುದು ನಿಯಮಿತವಾಗಿ ಸ್ಯಾನಿಟೈಸರ್ ನ್ನು ಬಳಕೆ ಮಾಡಬೇಕು.

ಮಾರುಕಟ್ಟೆ ಸಂಘಟನೆಗಳು ಮತ್ತು ವ್ಯಾಪಾರಿಗಳು ಕೋವಿಡ್-19 ಸುರಕ್ಷಿತ ಕ್ರಮಗಳನ್ನು ಅರ್ಪಣಾ ಮನೋಭಾವದಿಂದ ಅನುಷ್ಠಾನ ಮಾಡುತ್ತಾ ಕೋವಿಡ್-19 ಸರ್ವವ್ಯಾಪಿ ಸಾಂಕ್ರಾಮಿಕ ರೋಗ ಮುಕ್ತ ಮಾರುಕಟ್ಟೆಗಳಾಗಿ ಖಾತ್ರಿ ಪಡಿಸುವ ಆಶಯವನ್ನು ಹೊಂದಿದೆ

ಆಯುಕ್ತರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಇವರಿಗೆ:

1. ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್.
4. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಎಲ್ಲಾ ಜಿಲ್ಲೆಗಳು.
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು.
6. ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು.

ಪ್ರತಿ:

1. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ. ಆರೋಗ್ಯ ಸೌಧ,ಬೆಂಗಳೂರು.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ,ಬೆಂಗಳೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.

ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

**ನೆನಪಿಡಿ: ನಮ್ಮ ಹೋರಾಟ ರೋಗದ ವಿರುದ್ಧವೇ ಹೊರತು ರೋಗಿಯ ವಿರುದ್ಧವಲ್ಲ.**

**ಮನೆಯಲ್ಲಿರಿ- ಸುರಕ್ಷಿತವಾಗಿರಿ.**

**For COVID related queries please contact:**

*Helpline numbers:* 9745697456 & 104

**NIMHANS counselling helpline:** 080-46110007

**Ambulance**: 108;

***Apthamitra helpline:*** 14410

GoK Website on COVID-19: https://covid19.karnataka.gov.in/